ರಾಮಕೃಷ್ಣ ಮಠ, ಚೆನ್ನೈ

ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

ರಾಮಕೃಷ್ಣ ಮಹಾಸಂಘದ ವಿವಿಧ ಕೇಂದ್ರಗಳಲ್ಲಿ ದುರ್ಗಾ ಪೂಜೆಯು ೨೦೨೨ರ ಅಕ್ಟೋಬರ್ ಮೊದಲ ವಾರದಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಿತು. ಇದರೊಂದಿಗೆ ಇತ್ತೀಚೆಗೆ ನಡೆದ ಇನ್ನಿತರ ಕಾರ್ಯಕ್ರಮಗಳ ಸಂಕ್ಷಿಪ್ತ ನೋಟ ಇಲ್ಲಿದೆ:

ಶಾಖಾಕೇಂದ್ರಗಳಲ್ಲಿ ನಡೆದ ಚಟುವಟಿಕೆಗಳು

ಹೈದರಾಬಾದ್ ಮಠವು ತನ್ನ ಹ್ಯೂಮನ್ ಎಕ್ಸೆಲೆನ್ಸ್ ಸಂಸ್ಥೆಯ ೨೩ನೇ ಸಂಸ್ಥಾಪನಾ ದಿನವನ್ನು ಸೆಪ್ಟೆಂಬರ್ ೧೩ ರಂದು ಯುವ ಸಮ್ಮೇಳನ ಹಾಗೂ ಇತರ ಕಾರ್ಯಕ್ರಮಗಳೊಂದಿಗೆ ಆಚರಿಸಿತು. **ದೆಹಲಿ** ಕೇಂದ್ರವು ಪ್ರಾಥಮಿಕ ಶಾಲೆಗಳಿಗಾಗಿ ಐದು ವರ್ಷಗಳ 'Awakening' ಎಂಬ ಮೌಲ್ಯಶಿಕ್ಷಣ ಕಾರ್ಯಕ್ರಮವನ್ನು ಆರಂಭಿಸಿತು. **ದೇವಘರ್** ಕೇಂದ್ರವು ತನ್ನ ಶತಮಾನೋತ್ಸವದ ಉದ್ಘಾಟನೆಯನ್ನು ಸೆಪ್ಟೆಂಬರ್ ೨೨ರಿಂದ ೨೪ರ ವರೆಗೆ ನಡೆಸಿತು. ಇದರ ಅಂಗವಾಗಿ ಸಾರ್ವಜನಿಕ ಸಭೆ, ವಿಚಾರ ಸಂಕಿರಣ, ಶೈಕ್ಷಣಿಕ ವಸ್ತುಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. **ವಿಲ್ಲಿಪುರಂ** ಕೇಂದ್ರದಲ್ಲಿ ಹೊಸದಾಗಿ ನಿರ್ಮಿತವಾದ ಪ್ರಾರ್ಥನಾ ಮಂದಿರ ಮತ್ತು ನರ್ಸರಿ, ಪ್ರಾಥಮಿಕ ಶಾಲೆಗಳಿಗಾಗಿ ಬೋಧನಾ ಮಂದಿರಗಳನ್ನು ಉದ್ಘಾಟಿಸಲಾಯಿತು.

ಆಜಾದೀ ಕಾ ಅಮೃತ ಮಹೋತ್ಸವ

ಭಾರತವು ಸ್ವಾತಂತ್ರ್ಯವನ್ನು ಪಡೆದು ೭೫ ವರ್ಷಗಳಾದ ಹಿನ್ನೆಲೆಯಲ್ಲಿ 'ಆಜಾದೀ ಕಾ ಅಮೃತ್ ಮಹೋತ್ಸವ್' ಕಾರ್ಯಕ್ರಮವನ್ನು ವಿವಿಧ ಕೇಂದ್ರಗಳು ನಡೆಸಿದವು. ಆಲ್ಮೋರಾ, ಭೋಪಾಲ, ಚಂಡೀಗಢ, ಚಂಡೀಪುರ, ಕೊಯಮತ್ತೂರು ಮಿಷನ್, ಗುರಪ್, ಝಾರ್‌ಗ್ರಾಮ, ರಾಜ್‌ಕೋಟ್, ವಿವೇಕಾನಂದ ವಿಶ್ವವಿದ್ಯಾಲಯ, ಶ್ರೀನಗರ, ಸ್ವಾಮೀಜಿ ಪೂರ್ವಿಕರ ಮನೆ, ತ್ರಿಶೂರು, ವಾರಾಣಸಿ ಸೇವಾಶ್ರಮ, ಅಗರ್ತಲ, ಗ್ವಾಲಿಯರ್ ಹಾಗೂ ಇಂದೋರ್ ಕೇಂದ್ರಗಳು ಹಲವು ಕಾರ್ಯಕ್ರಮಗಳನ್ನು ನಡೆಸಿದವು.

ಮೌಲ್ಯಶಿಕ್ಷಣ ಕಾರ್ಯಕ್ರಮಗಳು ಮತ್ತು ಯುವಸಮ್ಮೇಳನಗಳು

ಆಲ್ಮೋರಾ, ಚೆನ್ನೈ, ದೆಹಲಿ, ಕಾನ್ಪುರ, ಕೊಯಿಲಾಂಡಿ, ರಾಜ್‌ಕೋಟ್, ಸೇಲಂ, ತಾಮ್‌ಲುಕ್, ತ್ರಿಶೂರು ಕೇಂದ್ರಗಳು ಸೆಪ್ಟೆಂಬರ್ ತಿಂಗಳಲ್ಲಿ ವಿವಿಧ ಮೌಲ್ಯಶಿಕ್ಷಣ ಕಾರ್ಯಕ್ರಮ ಹಾಗೂ ಯುವ ಸಮ್ಮೇಳನಗಳನ್ನು ನಡೆಸಿದವು.

ನೇತ್ರಚಿಕಿತ್ಸಾ ಶಿಬಿರಗಳು

ಈ ಕೆಳಗಿನ ಕೇಂದ್ರಗಳು ಸೆಪ್ಟೆಂಬರ್ ತಿಂಗಳ ವಿವಿಧ ದಿನಾಂಕಗಳಲ್ಲಿ ನೇತ್ರ ಚಿಕಿತ್ಸಾ ಶಿಬಿರಗಳನ್ನು ನಡೆಸಿದವು: ಬಾಂಕುರ, ಬಾರಾನಗರ ಮಿಷನ್, ಕೊಯಮತ್ತೂರು ಮಿಷನ್, ದೆಹಲಿ, ಗುರಪ್, ಜಲಪೈಗುಡಿ, ಕಾಮರಪುಕುರ, ಕಾನ್ಪುರ, ಲಕ್ನೋ, ಮದುರೈ, ಮಾನಸದ್ವೀಪ, ನಾಗಪುರ, ನೌರಾ, ಪೋರ್‌ಬಂದರ್, ಸೇಲಂ, ಸೋಮ್‌ಸರ್, ಹಾಗೂ ವಡೋದರ.

ಹೈದರಾಬಾದ್

ಚಂಡೀಗಢ

Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020